ಸಮಯವಾಗಿದ್ದರಿಂದ ಈಗ ಮೂತ್ರ ಬಾಧೆಯೊಂದಿಗೆ ಮಲಬಾಧೆಯೂ ಸೇರಿಕೊಂಡಿತ್ತು.

ರಾತ್ರಿ ಸೇವಿಸಿದ ಹಲಸಿನಹಣ್ಣು, ಸೇಂದಿ, ಗಂಜಿ ಎಲ್ಲವೂ ಸೇರಿ ಹೊಟ್ಟೆಯೊಳಗೆ ಕಲಸಿದಂತಾಗುತ್ತಿತ್ತು.

ಹೊಟ್ಟೆ ಅಮುಕಿ ಹಿಡಿದು ವಚ್ಚ ಮಗ್ಗುಲಲ್ಲಿ ಮಲಗಿ ಮಂಡಿ ಹೊಟ್ಟೆಯ ಬಳಿ ಬರುವಂತೆ ಕಾಲು ಕೊಕ್ಕರಿಸಿಕೊಂಡು ಬೆಳಕು ಹರಿಯುವ ಸಮಯಕ್ಕಾಗಿ ಕಾತರಿಸತೊಡಗಿದ.

ಅವನ ಯೋಚನಾ ಲಹರಿ ಮತ್ತೆ ಹಿಂದೆ ಸರಿಯಿತು..



ಅವನು ಈ ಊರಿಗೆ ಬಂದ ಆರಂಭದ ವರ್ಷದ ಒಂದು ದಿನ. ಗೌಡರ ತೋಟದಲ್ಲಿ ಹಳ ಕೊಚ್ಚುತ್ತಿದ್ದ. ಅವನೊಂದಿಗೆ ಇದ್ದವನು ಹೊಲಗೇರಿಯ ಮಂಜಣ್ಣ. ಕೆಳಗೆ ವಿಶಾಲವಾದ ಗದ್ದೆ ಬಯಲು. ಅದಕ್ಕೆ ಒತ್ತಿಕೊಂಡಂತೆಯೇ ಕಡಿದಾದ ಕಾಡಿನ ನಡುವೆ ಎರಡೆಕೆರೆಯಲ್ಲಿ ಚೌಡಿ ಬನ. ಅದಕ್ಕೆ ಹೊಂದಿಕೊಂಡಂತೆಯೇ ಇರುವುದು ಗೌಡರ ತೋಟ.

ಕತ್ತಿ ಕೆಳಗೆ ಹಾಕಿ ದುಮ್ಮ ಒಂದ ಮಾಡಲು ನಿಂತುಕೊಂಡಿದ್ದ. ಆಚೆ ಮುಂಬಿನಲ್ಲಿ ಕೊಚ್ಚುತ್ತಿದ್ದ ಮಂಜಣ್ಣ ಗಾಬರಿಯಿಂದ ಓಡಿ ಬಂದು ದುಮ್ಮನನ್ನೆಳೆದು ವಿರುದ್ಧ ದಿಕ್ಕಿಗೆ ತಿರುಗಿಸಿದ.

ಮಂಜಣ್ಣನ ಮೈ ಮೇಲೂ ಮೂತ್ರ ಸಿಡಿದಿತ್ತು. ದುಮ್ಮ ಏನೂ ತಿಳಿಯದೆ ಕಕ್ಕಾಬಿಕ್ಕಿಯಾಗಿ ಮಂಜಣ್ಣನ ಮುಖವನ್ನೇ ನೋಡಿದ.

'ನಿನಗೇನು ಕೇಡು ಬಂದಿತಾ ಮಾರಾಯ. ಅತ್ಲಾಗೆ ತಿರಿಕ್ಕಂಡು ಉಚ್ಚೆ ಹುಯ್ತದೀಯಲ್ಲಾ' ಎಂದ ಮಂಜಣ್ಣ.

'ಯಾಕೆ ಏನಾಯ್ತು? ಹುಯ್ದಿದ್ದು ತಪ್ಪಾ?' ಎಂದು ದುಮ್ಮ ತಡವರಿಸಿದ.

'ಆ ಕಡೆ ಕಾಡೊಳಗೆ ಚೌಡಿ ಬನ ಇಲ್ಲೇನಾ. ನಮ್ಮವು ಆ ಕಡೆ ತಿರುಗಿಯೂ ನೋಡಂಗಿಲ್ಲ. ಅಂತಾದ್ರಲ್ಲಿ ನೀನು ಆ ಕಡೆಗೇ ತಿರಿಕ್ಕಂಡು ಉಚ್ಚೆ ಹುಯ್ದಿದೀಯಲ್ಲ... ಅದೆಂತಹಾ ಘಟಾನುಘಟಿ ಚೌಡಿ ಗೊತ್ತಾ. ಅದೇನಾದ್ರೂ ಕೆರಳಿದ್ರೆ ನೀನು ನಿಂತ ನಿಂತಲ್ಲೇ ರಕ್ತ ಕಾರಿಕೊಂಡು ಸಾಯ್ತೀಯ...'

ಎನ್ನುತ್ತಾ ಚಡ್ಡಿ ಜೇಬಿನಿಂದ ಬೀಡಿ ತೆಗೆದು ದುಮ್ಮನಿಗೊಂದು ಕೊಡುತ್ತಾ 'ಬಾ ಒಂದು ಗಳಿಗೆ



ಕೂತ್ಗಾ. ಅದರ ಮಹಿಮೆ ಹೇಳ್ತೀನಿ' ಎಂದ.

ಬೀಡಿ ಹತ್ತಿಸಿಕೊಂಡ ದುಮ್ಮ ಮಂಜಣ್ಣನ ಮುಖವನ್ನು ಮಿಕಿ ಮಿಕಿ ನೋಡುತ್ತಾ ಕುಳಿತ.

ಈ ಚೌಡಮ್ಮನಿಗೆ ಎಂತೆಂತಹವ್ರು ಎಲ್ಲೆಲ್ಲಿಂದ ಹರಕೆ ಕಟ್ಟಳ್ತಾರೆ ಗೊತ್ತಾ. ಕೆಲವರು ಮನೇಲಿ ಏನಾದ್ರೂ ಒಳ್ಳೆ ಕಾರ್ಯ ನಡೀಲಿ ಅಂತಾ ಕುರಿಗ್ಗಂಡು ಹಂದಿ ಹರಕೆ ಕಟ್ಗಂಡ್ರೆ, ಇನ್ನು ಕೆಲವರು ತಮ್ಮ ಮನೆಯ ಕಷ್ಟ ಕಾರ್ಪಣ್ಯಗಳಿಗೆ ತಮಗಾಗದವರು ಯಾರೋ ಕಾರಣ ಆಗಿರಬೌದು. ಮಾಟ ಗೀಟ ಮಾಡ್ಸಿದಾರೋ ಏನೋ ಎಂಬ ಗುಮಾನಿಯ ಮೇಲೆ ಹೋಬಳಿ ಪೂಜಾರಿ ಹತ್ರ ಹೋಗ್ತಾರೆ. ಅವರು ಕವಡೆ ಬಿಟ್ಟು ಲೆಕ್ಕಾ ಹಾಕಿ 'ನಿಮ್ಮ ಹತ್ತಿರದವ್ರೆ ಯಾರೋ ನಿಮ್ಮ ಮನೆ ಹಾಳು ಮಾಡದಿಕ್ಕೆ ಮಾಡಿದಾರೆ. ಜೋಪಾನವಾಗಿರು' ಎಂದು ಹೇಳಿ ದಕ್ಷಿಣೆ ಪಡೆದು ಕಳಿಸುತ್ತಾರೆ.

ತಲೆ ಕೆಡಿಸಿಕೊಂಡ ಅವನು ತನ್ನ ದಾಯಾದಿಯೋ, ನೆಂಟನೋ, ಒಟ್ಟಿಗೆ ವ್ಯವಹಾರ ಮಾಡಿದವನೋ, ಯಾರಾದರೊಬ್ಬರ ಮೇಲೆ ಸಂಶಯಪಟ್ಟುಕೊಂಡು 'ಅವನಿಗೆ ತೊಂದ್ರೆಕೊಟ್ಟು ಅವನನ್ನು ಹಾಳು ಮಾಡು. ನಿನಗೆ ಮುಂದಿನ ಮುಂಗಾರಿನ ಪೂಜೆಯ ವೇಳೆ ಹಂದಿ ಹರಕೆ ಕೊಡ್ತೀನಿ' ಎಂದು ಹರಕೆ ಕಟ್ಟಿಕೊಂಡು ಬಂದು ಒಂದು ಹಂದಿ ಮರಿ ತಂದು ಹರಕೆಗೆಂದೇ ಸಾಕತೊಡಗುತ್ತಾನೆ.

ಬರುಬರುತ್ತಾ ಅವನು ಇಂತಹವರ ವಿರುದ್ಧವೇ ಕೈ ಮುಗಿದಿದ್ದಾನೆ ಎಂದು ಗಾಳಿ ಸುದ್ದಿ ಹರಡಿ ಆ